

بسم الله الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11-09-2020** ರಂದು ನೀಡಿದ **ಜುಮುಅ ಖುತ್‌ಬದ** ಸಾರಾಂಶ)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದು ನಾನು ಪ್ರಸ್ತಾಪಿಸಲಿರುವ ಬದರೀ ಸಹಾಬಿಯ ಹೆಸರು ಹಝ್ರತ್ ಬಿಲಾಲ್ ಬಿನ್ ರಬಾಹ್(ರ) ಎಂದಾಗಿದೆ. ಬಿಲಾಲ್ ಬಿನ್ ರಬಾಹ್(ರ) ಉಮಯ್ಯ ಬಿನ್ ಖಲ್‌ಫ್‌ರ ಗುಲಾಮ ಆಗಿದ್ದರು. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಕಡು ಗೋದಿ ಬಣ್ಣದವರಾಗಿದ್ದರು. ಸಪೂರವಾದ ದೇಹವನ್ನು ಹೊಂದಿದ್ದರು, ತಲೆಯ ಕೂದಲು ದಟ್ಟವಾಗಿದ್ದುವು ಮತ್ತು ತೆಳ್ಳಗಿನ ಮುಖದವರಾಗಿದ್ದರು. ಹಝ್ರತ್ ಬಿಲಾಲ್ ಹಲವು ವಿವಾಹಗಳನ್ನು ಮಾಡಿದ್ದರು. ಅವರ ಕೆಲವು ಪತ್ನಿಯರು ಅರೇಬಿಯಾದ ಅತ್ಯಂತ ಸಭ್ಯ ಮತ್ತು ಆದರಣೀಯ ಮನೆತನದವರಾಗಿದ್ದರು. ಅವರ ಓರ್ವ ಪತ್ನಿಯಾದ ಹಾಲ ಬಿನ್ತ್ ಔಫ್ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹು ಅನ್‌ಹುರ ಸಹೋದರಿಯಾಗಿದ್ದರು. ಹಝ್ರತ್ ಬಿಲಾಲ್‌ರಿಗೆ ಖಾಲಿದ್ ಎಂಬ ಹೆಸರಿನ ಒಬ್ಬ ಸಹೋದರ ಮತ್ತು ಗ಼ಫೀರ ಎಂಬ ಹೆಸರಿನ ಒಬ್ಬಳು ಸಹೋದರಿ ಇದ್ದರು. ಬಿಲಾಲ್ ಹಬ್‌ಶರಲ್ಲಿ ಮೊದಲಿಗರು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು. ಎಂದರೆ ಅವರು ಹಬ್‌ಶದ ಜನರಲ್ಲಿ ಈಮಾನ್ (ವಿಶ್ವಾಸ) ಕೈಗೊಂಡ ಮೊತ್ತಮೊದಲಿನ ವ್ಯಕ್ತಿಯಾಗಿದ್ದರು.

ಉರ್‌ವ ಬಿನ್ ಝುಬೇರ್ ವರದಿ ಮಾಡುತ್ತಾರೆ: ಹಝ್ರತ್ ಬಿಲಾಲ್ ಬಿನ್ ರಬಾಹ್(ರ) ತಾನು ಸ್ವೀಕರಿಸಿದ ಇಸ್ಲಾಂಧರ್ಮವನ್ನು ತ್ಯಜಿಸುವಂತೆ ಮಾಡಲಿಕ್ಕಾಗಿ ಅವರನ್ನು ಕಠಿಣವಾಗಿ ಶಿಕ್ಷಿಸಲಾಗುತ್ತಿತ್ತು. ಆದರೆ ಆ ಜನರು ಅವರಿಂದ ಹೇಳಿಸಲು ಬಯಸುವ ಮಾತುಗಳನ್ನು ಅವರು ಎಂದೂ ಉಚ್ಛರಿಸುತ್ತಿರಲಿಲ್ಲ. ಎಂದರೆ, ಅಲ್ಲಾಹನನ್ನು ನಿರಾಕರಿಸಲು ಆ ಜನರು ಹೇಳುತ್ತಿದ್ದರು. ಹಝ್ರತ್ ಬಿಲಾಲ್‌ರಿಗೆ ಶಿಕ್ಷೆ ನೀಡುವುದರಲ್ಲಿ ಜನರು ತೀವ್ರತೆ ತೋರಿಸುವಾಗಲೆಲ್ಲ ಅವರು **'ಅಹದ್ ಅಹದ್'** ಎಂದು ಹೇಳುತ್ತಿದ್ದರು.

ಒಂದು ವರದಿಯಲ್ಲಿ ಈರೀತಿ ಹೇಳಲಾಗಿದೆ: ಹಝ್ರತ್ ಬಿಲಾಲ್(ರ) ವಿಶ್ವಾಸ ಕೈಗೊಂಡಾಗ ಅವರನ್ನು ಅವರ ಮಾಲಿಕರು ಹಿಡಿದು ನೆಲದಲ್ಲಿ ಮಲಗಿಸಿ ಅವರ ದೇಹದ ಮೇಲೆ ದೊಡ್ಡಕಲ್ಲುಗಳನ್ನು ಮತ್ತು ದನದ ಚರ್ಮವನ್ನು ಇಟ್ಟು, ನಿನ್ನ ಪ್ರಭು ಲಾತ್ ಮತ್ತು ಉಝ್ಝ ಎಂದು ಹೇಳುತ್ತಿದ್ದರು. ಆದರೆ, ಹಝ್ರತ್ ಬಿಲಾಲ್ **ಅಹದ್ ಅಹದ್** ಎಂದೇ ಹೇಳುತ್ತಿದ್ದರು. ಹಝ್ರತ್ ಅಬೂಬಕ್ಕರ್ ಅವರ ಮಾಲೀಕರ ಬಳಿಗೆ ಬಂದು ನೀವು ಎಲ್ಲಿಯ ವರೆಗೆ ಈ ವ್ಯಕ್ತಿಗೆ ಕಷ್ಟ ಕೊಡುವಿರಿ? ಎಂದು ಕೇಳಿದರು. ನಂತರ ಹಝ್ರತ್ ಬಿಲಾಲ್‌ರನ್ನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಏಳು ಚಿನ್ನದ ನಾಣ್ಯಗಳನ್ನು ಕೊಟ್ಟು ಖರೀದಿಸಿ ಬಿಡುಗಡೆಗೊಳಿಸಿದರು. ಈ ರೀತಿ ಹಿಂಸೆಗೆ ಗುರಿಪಡಿಸಲಾಗುತ್ತಿದ್ದ ಏಳು ಅಡಿಯಾಳುಗಳನ್ನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಬಿಡುಗಡೆಗೊಳಿಸಿದ್ದರು ಎಂದು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹ ವರದಿ ಮಾಡುತ್ತಾರೆ. ಇವರಲ್ಲಿ ಹಝ್ರತ್ ಬಿಲಾಲ್ ಮತ್ತು ಹಝ್ರತ್ ಆಮಿರ್ ಬಿನ್ ಫುಹೈರ ಸೇರಿದ್ದರು. ಅಬೂಬಕ್ಕರ್ ನಮ್ಮ ಸರದಾರರಾಗಿರುವರು, ಅವರು ನಮ್ಮ ಸರದಾರರಾದ ಹಝ್ರತ್ ಬಿಲಾಲ್‌ರನ್ನು ಬಿಡುಗಡೆ ಗೊಳಿಸಿದ್ದರು ಎಂದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದ್ದಾಗಿ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಅಲ್ಲಾಹನು ಮುಸ್ಲಿಮರಿಗೆ ಮದೀನದಲ್ಲಿ ಸಮಾಧಾನವನ್ನು ನೀಡಿದ ಕಾರಣ ಅವರು ಸ್ವತಂತ್ರವಾಗಿ ಆರಾಧನೆ ಮಾಡಲು ಸಾಧ್ಯವಾದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರನ್ನು ಅಧಾನ್ ಕೊಡಲು (ಬಾಂಗ್ ಕೊಡಲು) ನಿಶ್ಚಯಿಸಿದರು. ಈ ಹಬ್‌ಶಿ ಗ಼ುಲಾಮ ಅಧಾನ್ ಕೊಡುವಾಗ **ಅಶ್‌ಹದುಅಲ್ಲಾಇಲಾಹ ಇಲ್ಲಲ್ಲಾಹ್** ಎಂಬುದಕ್ಕೆ ಬದಲಾಗಿ **ಅಸ್‌ಹದುಅಲ್ಲಾಇಲಾಹ ಇಲ್ಲಲ್ಲಾಹ್** ಎಂದು ಉಚ್ಛರಿಸುತ್ತಿದ್ದರು. ಹಝ್ರತ್ ಬಿಲಾಲ್‌ರ ಹಿಂದಿನ ಸ್ಥಿತಿಯ ಬಗ್ಗೆ ಅರಿವಿಲ್ಲದ ಮದೀನದ ಜನರು ಅದನ್ನು ಕೇಳಿ ನಗುತ್ತಿದ್ದರು. ಒಂದು ಬಾರಿ ಬಿಲಾಲ್‌ರ ಅಧಾನ್ ಕೇಳಿ ಈ ಜನರು ನಗುತ್ತಿರುವುದನ್ನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಲಿಸಿದರು. ಆಗ ಅವರು ಜನರ ಕಡೆಗೆ ತಿರುಗಿ ಹೇಳಿದರು: ನೀವು ಬಿಲಾಲ್‌ನ ಅಧಾನ್ ಕೇಳಿ ನಗುತ್ತೀರಿ, ಆದರೆ, ಅರ್ಶಿನಲ್ಲಿ ಅಲ್ಲಾಹನು ಅವರ ಅಧಾನ್ ಕೇಳಿ ಸಂತೋಷಗೊಳ್ಳುತ್ತಾನೆ. ಎಂದರೆ ಬಿಲಾಲಿಗೆ ಶೀನ್ ಉಚ್ಛರಿಸಲು ಆಗುತ್ತಿಲ್ಲ ಎಂಬುದನ್ನು ಮಾತ್ರ ನೀವು ಗಮನಿಸುತ್ತಿದ್ದೀರಿ. ಆದರೆ, ಶೀನ್ ಮತ್ತು ಸೀನ್‌ನಲ್ಲಿ ಏನಿದೆ ವಿಶೇಷ? ಅತಿ ಬಿಸಿಯಾದ ಮರಳಿನಲ್ಲಿ ಬರೀ ಮೈಯಲ್ಲಿ ಅವರನ್ನು ಮಲಗಿಸಿ, ದೌರ್ಜನ್ಯಗಾರರು ತಮ್ಮ ಬೂಟುಗಳ ಸಮೇತ ಅವರ ಎದೆಯ ಮೇಲೆ ಜಿಗಿಯುತ್ತಾ ಈಗ ಪಾಠವನ್ನು ಕಲಿತೆಯಾ? ಎಂದು ಕೇಳುತ್ತಿದ್ದಾಗ, ಬಿಲಾಲ್ ತನಗೆ ಗೊತ್ತಿರುವ ರೀತಿಯಲ್ಲಿ **ಅಹದ್ ಅಹದ್** ಎಂದು ಹೇಳಿ ದೇವನ ಏಕತ್ವವನ್ನು ಘೋಷಿಸುತ್ತಿದ್ದರು ಎಂಬುದನ್ನು ಅಲ್ಲಾಹನು ಬಲ್ಲನು. ಹೀಗೆ ಅವರು ತನ್ನ ನಿಷ್ಠೆಯನ್ನು, ತನ್ನ ಏಕದೇವ ವಿಶ್ವಾಸವನ್ನು ಮತ್ತು ಹೃದಯದ ದೃಢತೆಯನ್ನು ಅವರು ಸಾಬೀತು ಪಡಿಸುತ್ತಿದ್ದರು.

ಆದ್ದರಿಂದ ಅವರ **ಅಸ್‌ಹದು** ಹಲವು ಜನರ **ಅಶ್‌ಹದು**ಗಿಂತ ಹೆಚ್ಚಿನ ಮೌಲ್ಯವನ್ನು ಹೊಂದಿದೆ.

ಮೊತ್ತಮೊದಲಿನ ವಿಶ್ವಾಸಿಗಳಲ್ಲಿ ಹಝ್ರತ್ ಬಿಲಾಲ್ ಒಳಪಡುತ್ತಾರೆ. ಕೇವಲ ಏಳು ಜನರಿಗೆ ತಮ್ಮ ವಿಶ್ವಾಸವನ್ನು ಘೋಷಿಸಲು ಸೌಭಾಗ್ಯ ಲಭಿಸಿದ ಕಾಲದಲ್ಲಿ ಹಝ್ರತ್ ಬಿಲಾಲ್ ತಮ್ಮ ವಿಶ್ವಾಸವನ್ನು ಘೋಷಿಸಲು ಸೌಭಾಗ್ಯ ಪಡೆದಿದ್ದರು. ಆರಂಭ ಕಾಲದಲ್ಲಿ ಹಝ್ರತ್ ಬಿಲಾಲ್(ರ) ವಿಶ್ವಾಸ ಕೈಗೊಂಡ ಬಗ್ಗೆ ವಿವರಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಸ್ಲಾಮ್ ಸ್ವೀಕರಿಸಿದ ಮೊದಲಿಗರಲ್ಲಿ ಹಝ್ರತ್ ಖಬ್ಬಾಬ್ ರಝಿಯಲ್ಲಾಹು ಅನ್‌ಹು ಒಳಪಡುತ್ತಾರೆ: ಖಬ್ಬಾಬ್ ಮತ್ತು ಬಿಲಾಲ್, ಇವರಿಬ್ಬರಲ್ಲಿ ಯಾರು ಮೊದಲು ಇಸ್ಲಾಮ್ ಸ್ವೀಕರಿಸಿದ್ದರು ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಏಕೆಂದರೆ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರು: ಒಬ್ಬ ಗುಲಾಮ ಮತ್ತು ಒಬ್ಬ ಸ್ವತಂತ್ರ ವ್ಯಕ್ತಿ ನನ್ನಲ್ಲಿ ಮೊತ್ತಮೊದಲು ವಿಶ್ವಾಸ ಹೊಂದಿದ್ದರು ಎಂದು. ಇದರ ಬಗ್ಗೆ ಕೆಲವರು, ಅವರು ಹಝ್ರತ್ ಅಬೂಬಕ್ಕರ್ ಮತ್ತು ಹಝ್ರತ್ ಬಿಲಾಲ್ ಎಂದು ಹೇಳುತ್ತಾರೆ. ಇನ್ನು ಕೆಲವರು, ಅವರು ಹಝ್ರತ್ ಅಬೂಬಕ್ಕರ್ ಮತ್ತು ಹಝ್ರತ್ ಖಬ್ಬಾಬ್ ಆಗಿದ್ದರು ಎಂದು ಹೇಳುತ್ತಾರೆ.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹಝ್ರತ್ ಬಿಲಾಲ್(ರ) ಬದರ್, ಉಹದ್, ಖಂದಖ್ ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು ಎಂದು ತಬ್‌ಕಾತುಲ್ ಕುಬ್‌ರದಲ್ಲಿ ಬರೆಯಲಾಗಿದೆ. ಬದರ್ ಯುದ್ಧದಲ್ಲಿ ಅವರು ಇಸ್ಲಾಮಿನ ದೊಡ್ಡ ಶತ್ರುವಾದ ಉಮಯ್ಯ ಬಿನ್ ಖಲ್‌ಫ್‌ನನ್ನು ಕೊಂದರು. ಈತ ಹಝ್ರತ್ ಬಿಲಾಲ್(ರ) ಇಸ್ಲಾಮ್ ಸ್ವೀಕರಿಸಿದ ಕಾರಣ ಕಷ್ಟಕೊಡುತ್ತಿದ್ದ ವ್ಯಕ್ತಿಯಾಗಿದ್ದನು. ಉಮಯ್ಯ ಬಿನ್ ಖಲ್‌ಫ್‌ನನ್ನು ಕೊಂದ ಘಟನೆ ಸಹೀಹ್ ಬುಖಾರಿಯಲ್ಲಿ ವರದಿಯಾಗಿದೆ. ಆ ಘಟನೆಯನ್ನು ಖುಬೈಬ್ ಬಿನ್ ಅಸಾಫ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸಲಾದಾಗ ನಾನು ವಿವರಿಸಿದ್ದೆ.

ಹಝ್ರತ್ ಬಿಲಾಲ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾರ್ಯದರ್ಶಿ ಅಥವಾ ಖಜಾಂಚಿಯಾಗಿದ್ದರು ಎಂದು ಸಹ ಒಂದು ವರದಿಯಲ್ಲಿ ಬಂದಿದೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾಗಿ ಅನಸ್ ಬಿನ್ ಮಾಲಿಕ್ ಹೇಳುತ್ತಾರೆ: ಯಾರಿಗೂ ನೀಡಲು ಸಾಧ್ಯವಿಲ್ಲದಷ್ಟು ಕಷ್ಟತೆಗಳನ್ನು ನನಗೆ ಅಲ್ಲಾಹನ ಮಾರ್ಗದಲ್ಲಿ ನೀಡಲಾಗಿತ್ತು. ಅಲ್ಲಾಹನ ಮಾರ್ಗದಲ್ಲಿ ಯಾರನ್ನೂ ಹೆದರಿಸದಷ್ಟು ನನ್ನನ್ನು ಹೆದರಿಸಲಾಯಿತು. ಮೂರನೇ ರಾತ್ರಿ ಬರುವಷ್ಟರಲ್ಲಿ ನನ್ನ ಮತ್ತು ಬಿಲಾಲ್‌ರ ಬಳಿ ಬಹಳ ಅಲ್ಪವೇ ಆಹಾರ ಬಾಕಿಯುಳಿಯುತ್ತಿತ್ತು. ಅದು ಜೀವವುಳ್ಳ ಯಾರಿಗೂ ಸಾಕಾಗದಷ್ಟು ಆಗಿತ್ತು.

ಪ್ರಥಮ ಮುಅಧ್ದಿನ್ ಆಗುವ ಗೌರವವನ್ನು ಸಹ ಹಝ್ರತ್ ಬಿಲಾಲ್(ರ) ಪಡೆದಿದ್ದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪೂರ್ತಿ ಜೀವಿತದಲ್ಲಿ, ಯಾತ್ರೆಯಲ್ಲೂ ತಂಗುವಿಕೆಯಲ್ಲೂ ಹಝ್ರತ್ ಬಿಲಾಲ್(ರ) ಮುಅಧ್ದಿನ್ ಆಗಿದ್ದರು. ಇಸ್ಲಾಮಿನಲ್ಲಿ ಅಧಾನ್ ನೀಡಿದ ಮೊದಲ ವ್ಯಕ್ತಿ ಹಝ್ರತ್ ಬಿಲಾಲ್ ಆಗಿದ್ದರು.

ಮುಹಮ್ಮದ್ ಬಿನ್ ಅಬ್ದುಲ್ಲಾಹ್ ಬಿನ್ ಝೈದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ನಮಾಝಿಗೆ ಕರೆ ನೀಡಲು ಕಹಳೆ ಊದುವುದರ ಬಗ್ಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯೋಚಿಸಿದ್ದರು. ಅನಂತರ ಗಂಟೆ ಬಾರಿಸಲು ನಿರ್ದೇಶಿಸಿದ್ದರು. ಹಾಗೆ ಗಂಟೆಯನ್ನು ತಯಾರಿಸಲಾಯಿತು. ಅನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಝೈದ್ ಒಂದು ಕನಸು ಕಂಡರು. ಅವರು ಹೇಳಿದರು: ನಾನು ಕನಸಿನಲ್ಲಿ ಒಬ್ಬ ವ್ಯಕ್ತಿಯನ್ನು ಕಂಡೆ. ಅವರ ದೇಹದಲ್ಲಿ ಎರಡು ಹಸಿರು ಬಟ್ಟೆಯಿತ್ತು. ಅವರು ಕೈಯಲ್ಲಿ ಒಂದು ಗಂಟೆಯನ್ನು ಹಿಡಿದಿದ್ದರು. ಹೇ ಅಲ್ಲಾಹನ ದಾಸ, ನೀವು ಈ ಗಂಟೆಯನ್ನು ಮಾರಾಟ ಮಾಡುತ್ತೀರಾ ಎಂದು ನಾನು ಕನಸಿನಲ್ಲೇ ಅವರೊಡನೆ ಕೇಳಿದೆ. ನೀನು ಇದರಿಂದ ಏನು ಮಾಡುತ್ತಿಯಾ ಎಂದು ಅವರು ಕೇಳಿದರು. ನಾನು ಇದರ ಮೂಲಕ ಜನರನ್ನು ನಮಾಝಿಗೆ ಕರೆಯುವೆನು ಎಂದು ನಾನು ಹೇಳಿದೆ. ಇದಕ್ಕಿಂತ ಉತ್ತಮವಾದ ರೀತಿಯನ್ನು ನಾನು ಹೇಳಲೇ ಎಂದು ಅವರು ಕೇಳಿದರು. ಅದೇನೆಂದು ನಾನು ಕೇಳಿದೆ. ಅವರು ನನಗೆ ಅಧಾನಿನ ವಚನಗಳು ಹೇಳಿಕೊಟ್ಟರು. ಹಝ್ರತ್ ಅಬ್ದುಲ್ಲಾಹ್ ಬಿನ್ ಝೈದ್ ಹೊರಟು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾಗಿ ತಾನು ಕಂಡ ಕನಸನ್ನು ಅವರಿಗೆ ತಿಳಿಸಿದರು. ನಿಮ್ಮ ಸ್ನೇಹಿತ ಕನಸು ಕಂಡಿದ್ದಾನೆ ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಡನೆ ಹೇಳಿದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬ್ದುಲ್ಲಾಹ್ ಬಿನ್ ಝೈದ್‌ರೊಡನೆ ಹೇಳಿದರು: ನೀನು ಬಿಲಾಲ್‌ನೊಂದಿಗೆ ಮಸೀದಿಗೆ ಹೋಗು. ಈ ಅಧಾನಿನ ವಚನಗಳನ್ನು ಅವರಿಗೆ ಹೇಳುತ್ತಾ ಹೋಗು. ಬಿಲಾಲ್ ಅವುಗಳನ್ನು ಉಚ್ಚ ಸ್ವರದಲ್ಲಿ ಹೇಳಲಿ. ಏಕೆಂದರೆ ಬಿಲಾಲ್ ನಿನಗಿಂತ ಉಚ್ಚ ಶಬ್ದವನ್ನು ಹೊಂದಿರುವರು. ಹಝ್ರತ್ ಬಿಲಾಲ್‌ರೊಡನೆ ಹಝ್ರತ್ ಅಬ್ದುಲ್ಲಾಹ್ ಬಿನ್ ಝೈದ್ ಮಸೀದಿಯ ಕಡೆಗೆ ಹೋದರು. ಅವರು ಅಧಾನಿನ ವಚನಗಳನ್ನು ಬಿಲಾಲ್‌ರಿಗೆ ಹೇಳುತ್ತಾ ಹೋಗುತ್ತಿದ್ದರು. ಹಝ್ರತ್ ಬಿಲಾಲ್ ಅವುಗಳನ್ನು ಉಚ್ಚ ಸ್ವರದಲ್ಲಿ ಘೋಷಿಸುತ್ತಿದ್ದರು. ಹಝ್ರತ್ ಬಿಲಾಲ್ ಈ ವಚನಗಳೊಂದಿಗೆ ಉಚ್ಚ ಸ್ವರದಲ್ಲಿ ಮೊದಲ ಬಾರಿಗೆ ಅಧಾನ್ ನೀಡಿದಾಗ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಅದನ್ನು ಕೇಳಿ ಬೇಗ ಬೇಗನೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾಗಿ ಹೇಳಿದರು: ಯಾ ರಸೂಲುಲ್ಲಾಹ್, ಇಂದು ಯಾವ ವಚನಗಳೊಡನೆ ಬಿಲಾಲ್ ಅಧಾನ್ ಕೊಟ್ಟರೋ ಅದೇ ವಚನಗಳನ್ನು ನಾನು ಸಹ ಕನಸಿನಲ್ಲಿ ಕಂಡಿದ್ದೆ. ಒಂದು ವರದಿಯಲ್ಲಿ ಹೀಗೆಯೂ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಧಾನಿನ ವಚನಗಳನ್ನು ಕೇಳಿದಾಗ ಹೇಳಿದರು: ಇದರ ಪ್ರಕಾರ ವಹ್ಯ್ ಸಹ ಅವತೀರ್ಣವಾಗಿದೆ ಎಂದು. ಒಟ್ಟಿನಲ್ಲಿ ಈ ರೀತಿಯಲ್ಲಿ ಇಂದಿನ ಅಧಾನಿನ ವಿಧಾನ ಜಾರಿಗೆ ಬಂತು. ಇದು ಎಷ್ಟು ಅನುಗ್ರಹೀತ

ಮತ್ತು ಆಕರ್ಷನೀಯವಾದ ವಿಧಾನವಾಗಿದೆ ಎಂದರೆ, ಬೇರೆ ಯಾವುದೇ ವಿಧಾನಕ್ಕೆ ಇದಕ್ಕೆ ಸಾಟಿಯಾಗಿ ನಿಲ್ಲಲ್ಲು ಸಾಧ್ಯವಿಲ್ಲ. ಹೀಗೆ ಪ್ರತಿದಿನ ಐದು ಹೊತ್ತು ಇಸ್ಲಾಮಿಕ ಲೋಕದ ಪ್ರತಿ ಪಟ್ಟಣ ಮತ್ತು ಗ್ರಾಮದಲ್ಲಿ, ಪ್ರತಿಯೊಂದು ಮಸೀದಿಯಿಂದ ಅಲ್ಲಾಹನ ಏಕತ್ವ ಮತ್ತು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವದ ಶಬ್ದ ಹೊರಡುತ್ತದೆ ಮತ್ತು ಇಸ್ಲಾಮಿನ ಅಧ್ಯಾಪನೆಗಳ ಸಾರಾಂಶ ಅತ್ಯಂತ ಸುಂದರ ಮತ್ತು ಸಮಗ್ರ ವಾಕ್ಯಗಳೊಂದಿಗೆ ಜನರಿಗೆ ತಲುಪಿಸಲಾಗುತ್ತದೆ.

ಮೂಸಾ ಬಿನ್ ಮುಹಮ್ಮದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಬಿಲಾಲ್(ರ) ಅಧಾನ್ ಕೊಟ್ಟ ನಂತರ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗೆ ತಿಳಿಸಲು ಅವರ ಮನೆಯ ಬಾಗಿಲ ಬಳಿ ನಿಂತು **ಹಯ್ಯ ಅಲಸ್ಸಲಾತ್, ಹಯ್ಯ ಅಲಲ್‌ಫಲಾಹ್, ಅಸ್ಸಲಾತು ಯಾ ರಸೂಲಲ್ಲಾಹ್,** ಎಂದು ಹೇಳುತ್ತಿದ್ದರು. ಎಂದರೆ, ನಮಾಝಿಗೆ ಬನ್ನಿರಿ, ವಿಜಯ ಮತ್ತು ಯಶಸ್ಸಿಗಾಗಿ ಬನ್ನಿರಿ, ನಮಾಝ್ ಸಮಯವಾಯಿತು ಯಾ ರಸೂಲುಲ್ಲಾಹ್. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝಿಗಾಗಿ ಬರುತ್ತಿರುವುದನ್ನು ಕಾಣುವಾಗ ಹಝ್ರತ್ ಬಿಲಾಲ್ ಇಖಾಮತ್ ಶುರು ಮಾಡುತ್ತಿದ್ದರು. (ಹುಝೂರ್ ಹೇಳುತ್ತಾರೆ:) ಈ ವಿಷಯ ಸ್ಪಷ್ಟವಲ್ಲ. ಇಮಾಮ್ ಮಿಹ್ರಾಬಿಗೆ ಬಂದ ಮೇಲೆಯೇ ಇಖಾಮತ್ ನೀಡಲಾಗುತ್ತದೆ.

ಸುನನ್‌ಇಬ್ನು ಮಾಜದಲ್ಲಿ ಹಝ್ರತ್ ಬಿಲಾಲ್‌ರ ಒಂದು ವರದಿಯಿದೆ: ಹಝ್ರತ್ ಬಿಲಾಲ್(ರ) ಫಜ್ರ್ ನಮಾಝ್ ಬಗ್ಗೆ ತಿಳಿಸಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿದ್ದೆ ಮಾಡುತ್ತಿದ್ದಾರೆ ಎಂದು ಅವರಿಗೆ ತಿಳಿಸಲಾಯಿತು. ಆಗ ಹಝ್ರತ್ ಬಿಲಾಲ್(ರ) ಹೇಳಿದರು: **ಅಸ್ಸಲಾತು ಖೈರುಮ್ಮಿನನ್ನೌಮ್, ಅಸ್ಸಲಾತು ಖೈರುಮ್ಮಿನನ್ನೌಮ್.** ಹೀಗೆ ಫಜ್‌ರಿನ ಅಧಾನಿನಲ್ಲಿ ಈ ಪದಗಳನ್ನು ವರ್ಧಿಸಲಾಯಿತು. ಇದೇ ವಿಧಾನ ಜಾರಿಯಾಯಿತು. ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೇ ಬಿಲಾಲ್ ಇವು ಎಷ್ಟು ಉತ್ತಮ ಪದಗಳಾಗಿವೆ, ನೀನು ಇವುಗಳನ್ನು ಫಜ್‌ರಿನ ನಮಾಝಿನಲ್ಲಿ ಒಳಪಡಿಸು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮೂರು ಮುಅಧ್ಧಿನರು ಇದ್ದರು. ಹಝ್ರತ್ ಬಿಲಾಲ್, ಅಬೂ ಮಹ್‌ಧೂರ ಮತ್ತು ಅಮ್‌ರ್ ಬಿನ್ ಉಮ್ಮೇ ಮಕ್ತೂಮ್.

(ಖುತ್‌ಬದ ಕೊನೆಯಲ್ಲಿ ಹಝ್ರತ್ ಖಲೀಫತುಲ್ ಮಸೀಹರು ಹೇಳಿದರು: ಇವರ ಬಗ್ಗೆ ಇನ್ನೂ ಸ್ವಲ್ಪ ಪ್ರಸ್ತಾಪಿಸಲು ಬಾಕಿಯಿದೆ. ಮುಂದಿನ ಬಾರಿ ವಿವರಿಸುವೆನು – ಇನ್‌ಶಾಅಲ್ಲಾಹ್. ಅನಂತರ ಖಲೀಫತುಲ್ ಮಸೀಹರು, ಇತ್ತೀಚೆಗೆ ನಿಧನರಾದ ಜಾಮಿಅ ಅಹ್ಮದಿಯಾ ಯು.ಕೆ.ಯ ವಿದ್ಯಾರ್ಥಿಯಾದ ಬೆಲ್ಜಿಯಮಿನ ಸನ್ಮಾನ್ಯ ರಊಫ್ ಬಿನ್ ಮಖ್ಲೂದ್ ಜೂನಿಯರ್, ಇಸ್ಲಾಮಾಬಾದಿನ ಮಾಜಿ ನಾಇಬ್ ಅಮೀರ್ ಆದ ಸನ್ಮಾನ್ಯ ಝುಫರ್ ಇಖ್ಬಾಲ್ ಖುರೈಶಿ ಸಾಹಿಬ್, ಸೆನಿಗಾಲಿನ ಆನರೇಬಲ್ ಕಾಬೀನೆ ಕಾವಾಜಾಕಾಟ ಸಾಹಿಬ್ ಮತ್ತು ಪಾಕಿಸ್ತಾನದ ಸುಪ್ರೀಂಕೋರ್ಟ್ ಅಡ್ವೋಕೇಟ್ ಆಗಿದ್ದ ಸನ್ಮಾನ್ಯ ಮುಬಶ್ಶಿರ್ ಲತೀಫ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು. ಅವರೆಲ್ಲರ ಉನ್ನತ ಪದವಿಗಳಿಗಾಗಿ ಮತ್ತು ಮಗ್‌ಫಿರತಿಗಾಗಿ ಪ್ರಾರ್ಥಿಸಿದರು ಹಾಗೂ ಜುಮುಅ ನಮಾಝ್ ನಂತರ ಅವರೆಲ್ಲರ ಜನಾಝ ಗಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَاءِ وَالْمُنْكَرِ وَالْبَغْیِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*(atba)**

*At, Masjid Mubarak, Islamabad, Tilford, UK, On 11-09-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon